International Journal of Kannada Research
www.kannadajournal.com

ISSN: 2454–5813
IJKR 2023; 9(4): 198-202
© 2023 IJKR
www.kannadajournal.com
Received: 12-11-2023
Accepted: 16-12-2023

**ಕವಿತಾ ಬಿ**
ಸಹಾಯಕ ಪ್ರಾಧ್ಯಾಪಕರು,
ಸಂಸ್ಕೃತ ವಿಭಾಗ,
ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್,
ಶೇಷಾದ್ರಿಪುರಂ, ಬೆಂಗಳೂರು,
ಕರ್ನಾಟಕ, ಭಾರತ

Corresponding Author:
**ಕವಿತಾ ಬಿ**
ಸಹಾಯಕ ಪ್ರಾಧ್ಯಾಪಕರು,
ಸಂಸ್ಕೃತ ವಿಭಾಗ,
ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್,
ಶೇಷಾದ್ರಿಪುರಂ, ಬೆಂಗಳೂರು,
ಕರ್ನಾಟಕ, ಭಾರತ

# ಸಂಸ್ಕೃತ ಪದ್ಯಸಾಹಿತ್ಯದಲ್ಲಿ ಶತಕ ಕೃತಿಗಳ ಯೋಗದಾನ ಮತ್ತು ಮಹತ್ತ್ವ

**ಕವಿತಾ ಬಿ**

**DOI:** https://doi.org/10.22271/24545813.2023.v9.i4c.920

**ಸಾರಾಂಶ**

ಸಮುದ್ರೋಪಾದಿಯಂತೆ ಅತ್ಯಂತ ವಿಶಾಲವೂ, ಅಗಾಧವೂ ಆದ ಸಂಸ್ಕೃತ ಸಾಹಿತ್ಯವು ಸಮಸ್ತ ಭಾರತೀಯ ಸಾಹಿತ್ಯದ ಮಾತೃಸ್ವರೂಪಿಯಾಗಿದೆ. ಸಮಗ್ರ ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಆಚಾರ-ವಿಚಾರಗಳ ಸಾರಸರ್ವಸ್ವವೇ ಇಲ್ಲಿ ತಾಯಿಬೇರಾಗಿ, ಅನೇಕಾನೇಕ ಶಾಖೋಪಾದಿಯಲ್ಲಿ ಸದೃಢವಾಗಿ ಪಸರಿಸಿದೆ. ಸಂಪೂರ್ಣಜಗತ್ತಿನ ಸಾರಸರ್ವಸ್ವವೇ ಶತಕಕೃತಿಗಳಲ್ಲಿ ಲೀನವಾಗಿ, ಅನವರತ ಕಾವ್ಯಸುಧೆಯನ್ನು ಉಣಬಡಿಸುತ್ತಿದೆ ಎನ್ನಬಹುದು. ಶತಕಗ್ರಂಥಗಳಲ್ಲಿ ಮುಖ್ಯವಾಗಿ ಜಗತ್ತಿನ ಸೃಷ್ಟಿ, ಜೀವನ ಸಂಗತಿಗಳು, ಮೌಲ್ಯಗಳು, ಸತ್ಸಂಗತಿ, ವ್ಯವಹಾರ, ನೈತಿಕತೆ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಿಕ, ಆಲಂಕಾರಿಕ, ರಾಜನೈತಿಕ, ವೈಜ್ಞಾನಿಕ, ಭೌತಿಕ, ಮಾನಸಿಕ, ಆಧ್ಯಾತ್ಮಿಕ , ಲೌಕಿಕಾಲೌಕಿಕ, ಪಾರಮಾರ್ಥಿಕ, ಸಾಂದರ್ಭಿಕ, ನೈಸರ್ಗಿಕ, ತಾರ್ಕಿಕ, ತೌಲನಿಕ, ಕಾವ್ಯತ್ಮಕ, ಮಾನವೀಯ ಚಿಂತನ-ಮಂಥನಗಳೇ ಹತ್ತು ಹಲವಾರು ವಿಚಾರಧಾರೆಗಳಿಗೆ ಮಹಾಭೂಮಿಕೆಯಾಗಿದೆ.

ಆಧುನಿಕ ಭಾರತೀಯ ಸಂಸ್ಕೃತ ಕವಿಗಳಲ್ಲಿ ಅಲಂಕಾರ-ವ್ಯಾಕರಣವಿದ್ವಾಂಸರಾದ ಮೈಸೂರಿನ ವಿದ್ವಾನ್. ಡಾ|| ಎಚ್.ವಿ.ನಾಗರಾಜರಾವ್ ಮಹೋದಯರು ಅಗ್ರಗಣ್ಯರಾಗಿದ್ದು, ತಮ್ಮ ಸಾಹಿತ್ಯಸೇವೆಗಾಗಿ 'ರಾಷ್ಟ್ರಪತಿ ಪುರಸ್ಕಾರ'ಕ್ಕೂ ಭಾಜನರಾಗಿದ್ದಾರೆ. ನಾಗರಾಜಕವಿಯ ಪ್ರಮುಖ ಶತಕಕೃತಿಗಳಲ್ಲೂ ಶತಾಧಿಕ ಶ್ಲೋಕಗಳಿದ್ದು, ಸಮಸ್ತ ಜೀವ-ಜಗತ್ತಿನ ಅನೇಕಾನೇಕ ವಿಷಯ-ವಿಚಾರಗಳಿಂದ ಸಮೃದ್ಧವಾಗಿದ್ದು, ಆದರ್ಶ ಜೀವನನೀತಿ-ರೀತಿ-ಪ್ರೀತಿಗಳನ್ನು ಪ್ರತಿಬಿಂಬಿಸುವ ಸುಭಾಷಿತಸದೃಶ ಶ್ರೇಷ್ಠಗ್ರಂಥರಚನೆ ಎನಿಸಿವೆ. ಶತಕಗಳ ರಚನೆ ಕೇವಲ ಕಾವ್ಯಸೌಂದರ್ಯದ ಆಸ್ವಾದನೆಗಷ್ಟೇ ಅಲ್ಲದೇ, ಜೀವನದ ಆಮೂಲಾಗ್ರಸಾರವನ್ನೇ ಲೋಕಕ್ಕೆ ಸಮರ್ಪಿಸುವುದಾಗಿದೆ.

**ಮುಖ್ಯಪದಗಳು:** ಸಂಸ್ಕೃತಸಾಹಿತ್ಯ, ಸಾಹಿತ್ಯೇತಿಹಾಸ, ಪದ್ಯಸಾಹಿತ್ಯ, ಶತಕಗ್ರಂಥ, ಭರ್ತೃಹರಿ, ನೀತಿಶತಕ, ವೈರಾಗ್ಯಶತಕ

## ಪೀಠಿಕೆ

ಸಮುದ್ರೋಪಾದಿಯಂತೆ ಅತ್ಯಂತ ವಿಶಾಲವೂ, ಅಗಾಧವೂ ಆದ ಸಂಸ್ಕೃತ ಸಾಹಿತ್ಯವು ಸಮಸ್ತ ಭಾರತೀಯ ಸಾಹಿತ್ಯದ ಮಾತೃಸ್ವರೂಪಿಯಾಗಿದೆ. ಸಮಗ್ರ ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಆಚಾರ-ವಿಚಾರಗಳ ಸಾರಸರ್ವಸ್ವವೇ ಇಲ್ಲಿ ತಾಯಿಬೇರಾಗಿ, ಅನೇಕಾನೇಕ ಶಾಖೋಪಾದಿಯಲ್ಲಿ ಸದೃಢವಾಗಿ ಪಸರಿಸಿದೆ. ಇಂತಹ ಹೆಮ್ಮರ ಅನಾದಿಕಾಲದಿಂದಲೂ ಮಾನವಜೀವನದ ಮೇಲೆ ತನ್ನ ವಿಶಿಷ್ಟ ಪ್ರಭಾವ, ಪ್ರೇರಣೆ ಮತ್ತು ಛಾಪನ್ನು ಮೂಡಿಸುತ್ತಾ ಆಕರ್ಷಕವಾಗಿ ಬೆಳೆದು ನಿಂತು, ಮಹಾಜ್ಞಾನವೆಂಬ ಅನಂತ ಆಶ್ರಯವನ್ನು, ಜೀವನೋಪಾಯವನ್ನು ಮತ್ತು ಸುಬದ್ಧ ಜೀವನಮೌಲ್ಯಗಳನ್ನು ವರದಾನವನ್ನಾಗಿ ನೀಡುತ್ತಿದೆ. ಈ ಹೆಮ್ಮರದ ಶಾಖೆಗಳು ಸಹಸ್ರಾರು. ಅವುಗಳಲ್ಲಿ ಪದ್ಯಸಾಹಿತ್ಯವು ಆಚಂದ್ರಾರ್ಕ ಮಹತ್ತ್ವವನ್ನು ಪಡೆದು, ಇಡೀ ಜೀವ-ಜಗತ್ತಿನ ಆಗು-

ಹೋಗುಗಳನ್ನು ಪ್ರತಿಬಿಂಬಿಸುವ ಮಹಾದರ್ಪಣದಂತಿದೆ. ಇಂತಹ ಅನನ್ಯಸಾಹಿತ್ಯದಲ್ಲಿ ಶತಕಕೃತಿಗಳ ಪರಂಪರೆ ಅಪೂರ್ವವಾದುದು. ಸಂಪೂರ್ಣಜಗತ್ತಿನ ಸಾರಸರ್ವಸ್ವವೇ ಶತಕಕೃತಿಗಳಲ್ಲಿ ಲೀನವಾಗಿ, ಅನವರತ ಕಾವ್ಯಸುಧೆಯನ್ನು ಉಣಬಡಿಸುತ್ತಿದೆ ಎನ್ನಬಹುದು. ಇಂತಹ ಅನನ್ಯ ಕಾವ್ಯರಚನೆಯು ಕವಿಗಳ ಕವಿತ್ವಶಕ್ತಿಯನ್ನು ಪ್ರತಿಬಿಬಿಸುತ್ತವೆಂದು ಕವಿ ಗುಣವರ್ಮನು ಈ ರೀತಿ ಪ್ರಶಂಸಿಸಿದ್ದಾನೆ. –

"ಕವಿಃ ಕರೋತಿ ಕಾವ್ಯಾನಿ ಲಾಲಯತ್ಯುತ್ತಮೋ ಜನಃ |
ತರುಃ ಪ್ರಸೂತೋ ಪುಷ್ಪಾಣಿ ಮರುದ್ವಹತಿ ಸೌರಭಮ್ ||"

ಮನುಷ್ಯರಿಗೆ ಕಾವ್ಯಾಸ್ವಾದನೆ ಮುಂತಾದ ಒಳ್ಳೆಯ ವಿಷಯಗಳಿಂದ ಲಭಿಸುವ ಪರಮಸುಖವನ್ನು ಸುಭಾಷಿತಕಾರರು ಈ ರೀತಿ ಹೊಗಳಿದ್ದಾರೆ.

"ಸಂಸಾರವಿಷವೃಕ್ಷಸ್ಯ ದ್ವೇ ಫಲೇ ಹ್ಯಮೃತೋಪಮೇ |
ಕಾವ್ಯಾಮೃತರಸಾಸ್ವಾದಃ ಸಂಗತಿಃ ಸುಜನೈಸ್ಸಹ[1] ||"

ಸಂಸ್ಕೃತಸಾಹಿತ್ಯದ ಭಾಗಶಃ ಶತಕಕೃತಿಗಳು ಸುಭಾಷಿತಗಳಂತೆ ನಮ್ಮನ್ನು ಮನರಂಜಿಸಿ, ಮಾನವೀಯ ಮೌಲ್ಯಗಳೊಂದಿಗೆ ನಮಗೆ ಅತ್ಯುತ್ತಮ ಜೀವನಮಾರ್ಗದರ್ಶನವನ್ನು ಬೋಧಿಸುವ ಮೂಲಕ, ಆದರ್ಶ ಸಂಗತಿಗಳನ್ನು ಪ್ರಚುರಪಡಿಸುತ್ತವೆ.

"ಭಾಷಾಸು ಮುಖ್ಯಾ ಮಧುರಾ ದಿವ್ಯಾ ಗೀರ್ವಾಣಭಾರತೀ |
ತಸ್ಮಾದ್ಧಿ ಕಾವ್ಯಂ ಮಧುರಂ ತಸ್ಮಾದಪಿ ಸುಭಾಷಿತಮ್[2]||"

ಎಂದೇ ಪ್ರಸಿದ್ಧಿ ಉಂಟು
ಅಪಾರವಾದ ವಿಶಾಲ ಕಾವ್ಯ ಜಗತ್ತಿನಲ್ಲಿ ಕವಿಯೆಂಬ ಸೃಷ್ಟಿಕರ್ತಾ ಸಮಸ್ತ ಜೀವ-ಜಗತ್ತನ್ನೂ ತನ್ನ ಕಾವ್ಯದಲ್ಲಿ ಸೃಷ್ಟಿಸಬಲ್ಲನೆಂಬುದನ್ನು ಆಲಂಕಾರಿಕ ಆನಂದವರ್ಧನ ಈ ರೀತಿ ವರ್ಣಿಸಿದ್ದಾನೆ. –

"ಅಪಾರೇ ಕಾವ್ಯಸಂಸಾರೇ ಕವಿರೇಕಃ ಪ್ರಜಾಪತಿಃ |
ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೇ[3] ||"

ಶತಕಗ್ರಂಥಗಳಲ್ಲಿ ಮುಖ್ಯವಾಗಿ ಜಗತ್ತಿನ ಸೃಷ್ಟಿ, ಜೀವನ ಸಂಗತಿಗಳು, ಮೌಲ್ಯಗಳು, ಸತ್ಸಂಗತಿ, ವ್ಯವಹಾರ, ನೈತಿಕತೆ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಿಕ, ಆಲಂಕಾರಿಕ, ರಾಜನೈತಿಕ, ವೈಜ್ಞಾನಿಕ, ಭೌತಿಕ, ಮಾನಸಿಕ, ಆಧ್ಯಾತ್ಮಿಕ , ಲೌಕಿಕಾಲೌಕಿಕ, ಪಾರಮಾರ್ಥಿಕ, ಸಾಂದರ್ಭಿಕ, ನೈಸರ್ಗಿಕ, ತಾರ್ಕಿಕ, ತೌಲನಿಕ, ಕಾವ್ಯತ್ಮಕ, ಮಾನವೀಯ ಚಿಂತನ-ಮಂಥನಗಳೇ ಹತ್ತು ಹಲವಾರು ವಿಚಾರಧಾರೆಗಳಿಗೆ ಮಹಾಭೂಮಿಕೆಯಾಗಿದೆ. ಉದಾಹರಣೆಗೆ,

"ಗಂಗಾ ಪಾಪಂ ಶಶೀ ತಾಪಂ ದೈನ್ಯಂ ಕಲ್ಪತರುಸ್ತಥಾ |
ಪಾಪಂ ತಾಪಂ ಚ ದೈನ್ಯಂ ಚ ಹಂತಿ ಸಂತೋ ಮಹಾಶಯಾಃ[4]
||" ಎಂದಿದೆ.

ಲೋಕದಲ್ಲಿ ನಡೆಯಬಹುದಾದ ಸಂಗತಿಗಳನ್ನು ಶತಕಕವಿ ಈ ರೀತಿ ವಿಮರ್ಶಿಸಿದ್ದಾರೆ.-

"ನೈವಾರ್ಥೇನ ನ ಕಾಮೇನ ವಿಕ್ರಮೇಣ ನ ಚಾಜ್ಞಯಾ |
ಶಕ್ಯಾ ದೈವಗತಿರ್ಲೋಕೇ ನಿವರ್ತಯಿತುಮುದ್ಯತಾ[5] ||"

ನಾವು ಎಂತಹವರೊಡನೆ ಸಹವಾಸದಲ್ಲಿರಬೇಕು ಮತ್ತದರಿಂದಾಗುವ ಪ್ರಯೋಜನವನ್ನು ಹೀಗೆ ವರ್ಣಿಸಲಾಗಿದೆ. –

"ಗುಣವಜ್ಜನಸಂಸರ್ಗಾದ್ಯಾತಿ ಸ್ವಲ್ಪೋSಪಿ ಗೌರವಮ್ |
ಪುಷ್ಪಮಾಲಾನುಷಂಗೇಣ ಸೂತ್ರಂ ಶಿರಸಿ ಧಾರ್ಯತೇ[6] ||"

**ಉದ್ದೇಶಗಳು:**

೧.ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಸಂಸ್ಕೃತಸಾಹಿತ್ಯದ ಮಹತ್ತ್ವವನ್ನು ಅಭ್ಯಸಿಸಲು ಉತ್ತೇಜನ ಲಭಿಸುತ್ತದೆ.
೨. ಸಂಸ್ಕೃತಸಾಹಿತ್ಯದ ವಿವಿಧ ಶಾಖೆಗಳ-ವಿಭಾಗಗಳ ಸೂಕ್ಷ್ಮರೂಪದ ಪರಿಚಯ ಸಾಧ್ಯವಾಗುತ್ತದೆ.
೩. ಸಂಸ್ಕೃತ ಪದ್ಯಸಾಹಿತ್ಯದಲ್ಲಿ ಶತಕಗ್ರಂಥಗಳ ಸಂಕ್ಷೇಪ ಮಾಹಿತಿಯನ್ನು ತಿಳಿಯಬಹುದು.
೪. ಪ್ರಾಚೀನ ಮತ್ತು ಆಧುನಿಕ ಸಂಸ್ಕೃತಸಾಹಿತ್ಯದಲ್ಲಿನ ವಿಶಿಷ್ಟ ಶತಕಕೃತಿಗಳ ಮತ್ತು ಕರ್ತೃಗಳ ಸಾಹಿತ್ಯಿಕ, ಸಾಮಾಜಿಕ ಮತ್ತು ನೈತಿಕಮೌಲ್ಯಗಳ ಬಗೆಗಿನ ಕೊಡುಗೆಗಳನ್ನು ಅಭ್ಯಸಿಸಬಹುದು.
೫. ಪ್ರಸ್ತುತ ಸಂಸ್ಕೃತಶತಕಸಾಹಿತ್ಯಕ್ಕೆ ಆಧುನಿಕ ವಿದ್ವಾಂಸರಾದ ಡಾ. ಎಚ್.ವಿ.ನಾಗರಾಜರಾವ್ ಮಹೋದಯರ ಯೋಗದಾನವನ್ನು ಅರಿಯಬಹುದು.

***ಶತಕಸಾಹಿತ್ಯದಲ್ಲಿ ಭರ್ತೃಹರಿಯ ' ಶತಕತ್ರಯ' ಗ್ರಂಥಗಳ ಮಹತ್ತ್ವ**

ಸಂಸ್ಕೃತಸಾಹಿತ್ಯಕ್ಕೆ ಶತಕಕೃತಿಗಳ ಕೊಡುಗೆ ಅತ್ಯಪಾರ. ಅದರಲ್ಲಿ ಶ್ರೇಷ್ಠಕವಿ ಮತ್ತು ವಿದ್ವಾಂಸನಾದ ಭರ್ತೃಹರಿಯ 'ನೀತಿಶತಕ', 'ವೈರಾಗ್ಯಶತಕ' ಮತ್ತು 'ಶೃಂಗಾರಶತಕ' ಗ್ರಂಥಗಳು ಸಾಹಿತ್ಯಲೋಕದಲ್ಲಿ 'ಶತಕತ್ರಯ'ವೆಂದೇ ಲೋಕಪ್ರಿಯವಾಗಿವೆ. ಕವಿಯು ಏಳನೇ ಶತಮಾನದವನೆಂದು ಹಲವು ಮೂಲಗಳಿಂದ ತಿಳಿದುಬರುತ್ತದೆ. ಕವಿಯ ರಚನಾ ಕೌಶಲ್ಯ ಲೋಕವಿಖ್ಯಾತವಾಗಿದ್ದು, ಸಾಹಿತ್ಯಪ್ರಪಂಚಕ್ಕೆ ಅನುಪಮ ಕೊಡುಗೆ ನೀಡಿದ್ದಾನೆ. ಇವನ ಶತಕಗ್ರಂಥಗಳು 'ಸುಭಾಷಿತತ್ರಿಶತಿ' ಎಂದೇ ಜನಜನಿತವಾಗಿವೆ. ಪ್ರತಿಯೊಂದರಲ್ಲಿ ೧೦೦ ಶ್ಲೋಕಗಳಂತೆ ಒಟ್ಟು ೩೦೦ ಶ್ಲೋಕಗಳಿವೆ.

[1] ಸುಭಾಷಿತರತ್ನಭಾಂಡಾಗಾರಮ್
[2] ಸುಭಾಷಿತರತ್ನಭಾಂಡಾಗಾರಮ್
[3] ಧ್ವನ್ಯಾಲೋಕಃ – ೧.೩
[4] ಸುಭಾಷಿತರತ್ನಭಾಂಡಾಗಾರಮ್
[5] ಸುಭಾಷಿತಸುಧಾನಿಧಿಃ
[6] ಸುಭಾಷಿತಸುಧಾನಿಧಿ

ನೀತಿಶತಕದಲ್ಲಿ ನೀತಿಸಾರಪದ್ಧತಿ, ಮೂರ್ಖಪದ್ಧತಿ, ಕರ್ಮಪದ್ಧತಿಗಳೇ ಮೊದಲಾದ ಹತ್ತು ಪ್ರಕರಣಗಳಿವೆ. ವೈರಾಗ್ಯಶತಕದಲ್ಲಿ ವಿಷಯ ಪರಿತ್ಯಾಗ ವಿಡಂಬನೆ, ಕಾಲ ಮಹಿಮೆ, ನಿತ್ಯಾಸತ್ಯ ವಸ್ತುವಿಚಾರಾದಿ ಹತ್ತು ಪ್ರಕರಣಗಳಿವೆ. ಶೃಂಗಾರಶತಕದಲ್ಲಿ ಸ್ತ್ರೀಪ್ರಶಂಸೆ, ಋತುವರ್ಣನೆ, ಸುವಿರಕ್ತ-ದುರ್ವಿರಕ್ತ ಪದ್ಧತಿ ಎಂಬಿತ್ಯಾದಿ ಐದು ಪ್ರಕರಣಗಳಿವೆ. ಈತನ ರಚನೆಗಳ ಸೂಕ್ಷ್ಮ ಅಧ್ಯಯನದಿಂದ ಈತನು ಶಿವಭಕ್ತನೆಂದು ತಿಳಿಯುತ್ತದೆ. ಇವನು ವ್ಯಾಕರಣ ಮತ್ತು ದರ್ಶನಶಾಸ್ತ್ರಗಳಲ್ಲೂ ಪಂಡಿತನಾಗಿದ್ದು 'ವಾಕ್ಯಪದೀಯ' ಎಂಬ ವಿಶಿಷ್ಟ ಕೃತಿಯನ್ನು ರಚಿಸಿದ್ದಾನೆ. ಇದರಲ್ಲಿ ಸುಮಾರು ೨,೦೦೦ ದಷ್ಟು ತ್ರಿಪದಿಗಳಿಂದ ಕೂಡಿದ ಕಾವ್ಯವಿದ್ದು, ಅನುಷ್ಟುಪ್ ಛಂದಸ್ಸಿನಲ್ಲಿ ರಚಿತವಾಗಿದೆ. 'ನೀತಿಶತಕ'ದಲ್ಲಿ ಸಜ್ಜನ-ದುರ್ಜನರ ಸ್ವಭಾವ ವೈಷಮ್ಯಗಳನ್ನು ವಿಶೇಷವಾಗಿ ಪರಾಮರ್ಶಿಸಲಾಗಿದೆ. –

"ಏತೋ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಂ ಪರಿತ್ಯಜ್ಯ ಯೇ
ಸಾಮಾನ್ಯಾಸ್ತು ಪರಾರ್ಥಮುದ್ಯಮಭೃತಃ ಸ್ವಾರ್ಥಾವಿರೋಧೇನ ಯೇ |
ತೇSಮೀ ಮಾನುಷರಾಕ್ಷಸಾಃ ಪರಹಿತಃ ಸ್ವಾರ್ಥಾಯ ನಿಘ್ನಂತಿ ಯೇ
ಯೇ ನಿಘ್ನಂತಿ ನಿರರ್ಥಕಂ ಪರಹಿತಂ ತೇ ಕೇ ಜಾನೀಮಹೇ.[7]||"

"ಜಾಡ್ಯಂ ಧಿಯೋ ಹರತಿ ಸಿಂಚತಿ ವಾಚಿ ಸತ್ಯಂ
ಮಾನೋನ್ನತಿಂ ದಿಶತಿ ಪಾಪಮಪಾಕರೋತಿ |
ಚೇತಃ ಪ್ರಸಾದಯತಿ ದಿಕ್ಷು ತನೋತಿ ಕೀರ್ತಿಂ
ಸತ್ಸಂಗತಿಃ ಕಥಯ ಕಿಂ ನ ಕರೋತಿ ಪುಂಸಾಮ್[8] ||"

"ದುರ್ಜನಃ ಪರಿಹರ್ತವ್ಯೋ ವಿದ್ಯಯಾಲಂಕೃತೋSಪಿ ಸನ್ |
ಮಣಿನಾ ಭೂಷಿತಃ ಸರ್ಪಃ ಕಿಮಸೌ ನ ಭಯಂಕರಃ.[9] ||"

"ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಮ್ |
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ.[10] ||"

"ಸಂಪತ್ಸು ಮಹತಾಂ ಚಿತ್ತಂ ಭವತ್ಯುತ್ಪಲಕೋಮಲಮ್ |
ಆಪತ್ಸು ಚ ಮಹಾಶೈಲಶಿಲಾಸಂಘಾತಕರ್ಕಶಮ್.[11] ||"

ಪುಣ್ಯಕರ್ಮಗಳ ಸುಕೃತದಿಂದ ಮನುಷ್ಯನ ರಕ್ಷಣೆ ಮತ್ತು ಪಾಲನೆ ಸರ್ವತ್ರ ಸಾಧ್ಯವೆಂಬ ಆರ್ಯೋಕ್ತಿ ಪುನಃ ಪುನಃ ಶತಕಗಳಲ್ಲಿ ಹೀಗೆ ಅನುರಣನವಾಗುತ್ತದೆ.

"ವನೇ ರಣೇ ಶತ್ರುಜಲಾಗ್ನಿಮಧ್ಯೇ
ಮಹಾರ್ಣವೇ ಪರ್ವತಮಸ್ತಕೇ ವಾ |
ಸುಪ್ತಂ ಪ್ರಮತ್ತಂ ವಿಷಮಸ್ಥಿತಂ ವಾ
ರಕ್ಷಂತಿ ಪುಣ್ಯಾನಿ ಪುರಾಕೃತಾನಿ.[12] ||"

ಸಮಾಜದಲ್ಲಿ ಅಹಂಕಾರದಿಂದ ಮೆರೆಯುವ ಅಲ್ಪಜ್ಞಾನಿಗಳನ್ನು ತೃಪ್ತಿಪಡಿಸುವುದು ತುಂಬಾ ಕಠಿಣವಾದ ಕೆಲಸವೆಂಬುದನ್ನು ಈ ರೀತಿ ತರ್ಕಿಸಲಾಗಿದೆ. –

"ಅಜ್ಞಃ ಸುಖಮಾರಾಧ್ಯಃ ಸುಖತರಮಾರಾಧ್ಯತೇ ವಿಶೇಷಜ್ಞಃ |
ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನ ರಂಜಯತಿ.[13] ||"

ಮನುಷ್ಯರಾದ ನಾವು ಸದಾ ನಮ್ಮ ಸುತ್ತಮುತ್ತಲಿರುವ ಅನ್ಯರನ್ನೇ ಶತ್ರುಗಳೆಂದು ಭಾವಿಸಿ, ಚಿಂತಿಸುತ್ತೇವೆ. ಆದರೆ, ನಮ್ಮೊಳಗೇ ಇರುವ ಆಂತರಿಕಶತ್ರುಗಳನ್ನು ಗುರುತಿಸಿ ಎಚ್ಚೆತ್ತುಕೊಳ್ಳಬೇಕೆಂದು ಕವಿಯ ಆಶಯ.

"ಆಲಸ್ಯಂ ಹಿ ಮನುಷ್ಯಾಣಾಂ ಶರೀರಸ್ಥೋ ಮಹಾನ್ ರಿಪುಃ |
ನಾಸ್ತ್ಯುದ್ಯಮಸಮೋ ಬಂಧುಃ ಕುರ್ವಾಣೋ ನಾವಸೀದತಿ.[14] ||"

ಮಾನವರಿಗಿರುವ ಅತ್ಯಂತ ಗಹನವಾದ ಸಂಸಾರದ ಆಶಾ-ಪಾಶವನ್ನು ಕವಿ ಹೀಗೆ ವಿಶ್ಲೇಷಿಸಿದ್ದಾನೆ. –

"ವಲೀಭಿರ್ಮುಖಮಾಕ್ರಾಂತಂ ಪಲಿತೇನಾಂಕಿತಂ ಶಿರಃ |
ಗಾತ್ರಾಣಿ ಶಿಥಿಲಾಯಂತೇ ತೃಷ್ಣೈಕಾ ಕರುಣಾಯತೇ.[15] ||"

ಅಲ್ಪಪ್ರಮಾಣದ ವಿಷಯ-ವಸ್ತುಗಳಿಂದಲೂ ನಮ್ಮ ಜೀವನ ಸುಖಮಯವೂ, ಸಂತೃಪ್ತವೂ ಹಾಗೂ ಅರ್ಥಗರ್ಭಿತವೂ ಆಗಿರಬಹುದೆಂಬುದನ್ನು ಇಲ್ಲಿ ಪರಾಮರ್ಶಿಸಲಾಗಿದೆ. –

"ವಯಮಿಹ ಪರಿತುಷ್ಟಾ ವಲ್ಕಲೈಸ್ತ್ವಂ ದುಕೂಲೈಃ
ಸಮ ಇವ ಪರಿತೋಷೋ ನಿರ್ವಿಶೇಷೋ ವಿಶೇಷಃ |
ಸ ತು ಭವತು ದರಿದ್ರೋ ಯಸ್ಯ ತೃಷ್ಣಾ ವಿಶಾಲಾ
ಮನಸಿ ಚ ಪರಿತುಷ್ಟೇ ಕೋSರ್ಥವಾನ್ ಕೋ ದರಿದ್ರಃ.[16] ||"

ಅಂದರೆ, ಯಾರ ಆಸೆಯು ಹೆಚ್ಚಾಗಿದ್ದು ತೃಪ್ತಿಹೊಂದುವುದಿಲ್ಲವೋ ಅವರೇ ದರಿದ್ರರು ಮತ್ತು ಯಾರು ಧನದಿಂದ ದರಿದ್ರನಾದರೂ ಮನಸ್ಸಿನಲ್ಲಿ ತೃಪ್ತನಾಗಿದ್ದರೆ ಅವನೇ ಶ್ರೀಮಂತನೆಂದು ವಿಮರ್ಶಿಸಲಾಗಿದೆ. ಹೀಗೆ, ಭರ್ತೃಹರಿ ಕವಿಯ ಅಪೂರ್ವ ರಚನೆಯು ಸಂಸ್ಕೃತ ಶತಕಸಾಹಿತ್ಯ ಇತಿಹಾಸದಲ್ಲಿ

7 ನೀತಿಶತಕಮ್-೭೨
8 ನೀತಿಶತಕಮ್-೨೧
9 ನೀತಿಶತಕಮ್-೫೧
10 ನೀತಿಶತಕಮ್-೮೧
11 ನೀತಿಶತಕಮ್-೬೪
12 ನೀತಿಶತಕಮ್-೯೬
13 ನೀತಿಶತಕಮ್-೧
14 ನೀತಿಶತಕಮ್-೮೩
15 ವೈರಾಗ್ಯಶತಕಮ್-೮
16 ವೈರಾಗ್ಯಶತಕಮ್-೫೩

ಪ್ರಧಾನ ಮೈಲಿಗಲ್ಲಾಗಿದ್ದು, ಮುಂದಿನ ನೂರಾರು ಕರ್ತೃ ಮತ್ತು ಕೃತಿಗಳಿಗೆ ಪ್ರೇರಣಾಪ್ರದವಾಗಿದೆ.

**ಶತಕಸಾಹಿತ್ಯದಲ್ಲಿ ನಾಗರಾಜಕವಿಯ ' ಶತಕಗ್ರಂಥ' ಗ ಳ ಮಹತ್ತ್ವ ಮತ್ತು ಯೋಗದಾನ**

ಆಧುನಿಕ ಭಾರತೀಯ ಸಂಸ್ಕೃತ ಕವಿಗಳಲ್ಲಿ ಅಲಂಕಾರ-ವ್ಯಾಕರಣವಿದ್ವಾಂಸರಾದ ಮೈಸೂರಿನ ವಿದ್ವಾನ್. ಡಾ|| ಎಚ್.ವಿ.ನಾಗರಾಜರಾವ್ ಮಹೋದಯರು ಅಗ್ರಗಣ್ಯರಾಗಿದ್ದು, ತಮ್ಮ ಸಾಹಿತ್ಯಸೇವೆಗಾಗಿ 'ರಾಷ್ಟ್ರಪತಿ ಪುರಸ್ಕಾರ'ಕ್ಕೂ ಭಾಜನರಾಗಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡ, ಸಂಸ್ಕೃತ ಹಾಗೂ ಆಂಗ್ಲಭಾಷಾ ವಿಶಾರದರಾದ ಇವರು ಸಂಸ್ಕೃತಸಾಹಿತ್ಯದ ಬಹುಮುಖಕ್ಷೇತ್ರಗಳಲ್ಲಿ ಕೃತಭೂರಿ ಪರಿಶ್ರಮಿ ಎನಿಸಿದ್ದಾರೆ. ಸಾಹಿತ್ಯಕಾರ್ಯಕ್ಷೇತ್ರದಲ್ಲಿ ಇವರ ಕೊಡುಗೆ ನೂರಾರು. ಪದ್ಯ, ಗದ್ಯ, ಚಂಪೂ, ನಾಟಕ, ಮುಕ್ತಕ, ಅನುವಾದ, ಸ್ವರಚಿತ ಕಥಾಪ್ರಕಾರಗಳಲ್ಲದೇ ಹಲವಾರು ಶತಕಕೃತಿಗಳನ್ನು ರಚಿಸಿ ಸಂಸ್ಕೃತಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

**ನಾಗರಾಜಕವಿಯ ಪ್ರಮುಖ ಶತಕಕೃತಿಗಳೆಂದರೆ,**

೧. ಸಜ್ಜನಶತಕಮ್ ೬. ದೃಷ್ಟಾಂತಶತಕಮ್
೨. ದುರ್ಜನಶತಕಮ್ ೭. ಅರ್ಥಾಂತರನ್ಯಾಸಶತಕಮ್
೩. ನಾಗರಾಜಶತಕಮ್ ೮. ನಿಂದಾ-ಸ್ತುತಿಶತಕಮ್
೪. ಶ್ರೀರಾಮಚಂದ್ರಶತಕಮ್ ೯. ಶಾರ್ದೂಲವಿಕ್ರೀಡಿತಶತಕಮ್
೫. ಕಲಿವಿಮರ್ಶನಶತಕಮ್ ೧೦. ಶತವೃತ್ತಶತಕಮ್ ಇತ್ಯಾದಿ.

ಈ ಎಲ್ಲಾ ಶತಕಕೃತಿಗಳಲ್ಲೂ ಶತಾಧಿಕ ಶ್ಲೋಕಗಳಿದ್ದು, ಸಮಸ್ತ ಜೀವ-ಜಗತ್ತಿನ ಅನೇಕಾನೇಕ ವಿಷಯ-ವಿಚಾರಗಳಿಂದ ಸಮೃದ್ಧವಾಗಿದ್ದು, ಆದರ್ಶ ಜೀವನನೀತಿ-ರೀತಿ-ಪ್ರೀತಿಗಳನ್ನು ಪ್ರತಿಬಿಂಬಿಸುವ ಸುಭಾಷಿತಸದೃಶ ಶ್ರೇಷ್ಠಗ್ರಂಥರಚನೆ ಎನಿಸಿವೆ. ಜೊತೆಗೆ 'ಅನ್ಯಾಪದೇಶಶತಕಮ್', 'ಆನಂದಸಾಗರಸ್ತವಃ', 'ಭಲ್ಲಟಶತಕಮ್' ಮತ್ತು 'ಸುಭಾಷಿತಕೌಸ್ತುಭಃ' ಎಂಬ ಸುಪ್ರಸಿದ್ಧ ಸಂಸ್ಕೃತಶತಕಕೃತಿಗಳನ್ನು ವಿದ್ವತ್ಪೂರ್ಣ ವ್ಯಾಖ್ಯಾನದೊಂದಿಗೆ ಅನುವಾದಿಸಿದ್ದಾರೆ. ಪಂಡಿತನೀಲಕಂಠದೀಕ್ಷಿತರ 'ಕಲಿವಿಡಂಬನಶತಕಮ್' ಕೃತಿಯಿಂದ ಪ್ರೇರಿತರಾಗಿ ನಾಗರಾಜಕವಿಯು 'ಕಲಿವಿಮರ್ಶನಶತಕಮ್' ಎಂಬ ಕಲಿಕಾಲವನ್ನು ಕುರಿತ ವಿಮರ್ಶಾತ್ಮಕ ಮತ್ತು ವಿಶ್ಲೇಷಣಾತ್ಮಕ ಕೃತಿಯನ್ನು ರಚಿಸಿದ್ದಾರೆ. ತಮ್ಮೆಲ್ಲಾ ಕೃತಿಗಳಲ್ಲೂ ಅಲಂಕಾರಭೂಯಿಷ್ಠ ಪದ್ಯರಚನೆಯಿಂದ ಸಹೃದಯರನ್ನು ಸಂತುಷ್ಟಗೊಳಿಸಿದ್ದಾರೆ. ಇವರ ಪ್ರತಿಭೆ ಮತ್ತು ಕವಿತ್ವಶಕ್ತಿಯ ಸಂಸ್ಕಾರವಿಶೇಷಗಳು ಕಾವ್ಯದಲ್ಲಿ ರಾರಾಜಿಸುತ್ತಿವೆ.
ಇವರ ಕಾವ್ಯರಚನಾಪ್ರೌಢಿಮೆಗೆ ಒಂದು ಉದಾಹರಣೆಯೆಂದರೆ,

"ವಾಣೀತಿ ವಿಶ್ವಜನನೀತಿ ಸರಸ್ವತೀತಿ
ವಾಗೀಶ್ವರೀತಿ ವಿಧಿವಕ್ತ್ರನಿವಾಸಿನೀತಿ |
ಬ್ರಾಹ್ಮೀತಿ ಗೀರಿತಿ ಸನಾತನಭಾರತೀತಿ
ಹೆ ಶಾರದೇ ಕವಿವರಾ ಭವತೀಂ ಗೃಣಂತಿ ||"

ಎಂಬ ವಾಗ್ದೇವಿಯ ವರ್ಣನೆಯಲ್ಲಿ ಆಸ್ವಾದಿಸಬಹುದು.
ಜಗತ್ತಿನಲ್ಲಿ ನಡೆಯುವ ಅನೇಕ ಕಟುಸಂಗತಿಗಳನ್ನು ಮಾರ್ಮಿಕವಾಗಿ ನಾಗರಾಜಕವಿ ವರ್ಣಿಸಿದ್ದಾರೆ. –

"ಆಸ್ವಾದಯಂತಿ ಮಧು ಮಕ್ಷಿಕಾಸಂಚಿತಮ್
ವಸ್ತ್ರಾಣಿ ಕೃಮಿಕೋಶಜಾನಿ ವಸತೇ |
ಧೇನುಭಿರ್ವತ್ಸಾಯ ರಕ್ಷಿತಂ ಕ್ಷೀರಮಪಿ
ಚೂಷಂತಿ ಮಾನವಾ ನಾಗರಾಜ.[17] ||"

ಲೋಕದಲ್ಲಿನ ಸಜ್ಜನವಿಷಯಕ ಅನೇಕ ವಿಚಾರಗಳನ್ನು ಚರ್ಚಿಸಲಾಗಿದೆ.
"ಸರ್ವೋಽಪಿ ಲೋಕಸ್ತ್ವಯಿ ವಿತ್ತಪೂರ್ಣೇ ನಮಸ್ಕರೋತಿ ಸ್ತುತಿಮಾತನೋತಿ |
ವಿಪಸ್ತ್ವಸೌ ದೂರತರಂ ಪ್ರಯಾತಿ ಯಸ್ತ್ವಂತಿಕೇ ತಾಸು ಸ ಸಜ್ಜನಸ್ಸ್ಯಾತ್.[18] ||"

"ಸದಾಪಿ ಧರ್ಮಂ ಹೃದಿ ಧಾರಯಂತಃ
ಪಾಪಾಜ್ಜನಾನ್ ಭೂರಿ ನಿವಾರಯಂತಃ |
ಪುಣ್ಯಂ ಸಮಸ್ತೈರಪಿ ಕಾರಯಂತಃ
ಸಂತೋ ಜಯಂತು ಪ್ರತಿಭಾನವಂತಃ[19] ||"

ಸಮಾಜದಲ್ಲಿ ದುರ್ಜನರ ವ್ಯವಹಾರವನ್ನು ಕುರಿತಂತೆ ಶತಕಕೃತಿಯ ರಚನೆಗೆ ಮುಂದಾಗಿದ್ದೇನೆಂದು ಕವಿ ವರ್ಣಿಸುತ್ತಿರುವ ವಿಶೇಷಶ್ಲೋಕ.

"ದುರ್ಜನಾನಾಂ ಸ್ವಭಾವಂ ಚ ಸತಾಂ ಕ್ಲೇಶಂ ಚ ತತ್ಕೃತಮ್ |
ವಿವರೀತುಂ ನಾಗರಾಜೋ ವಿದ್ವಾನ್ ಶತಕಮಭ್ಯಧಾತ್ .[20]||"

ಸಾಮಾನ್ಯವಾಗಿ ನಾವೆಲ್ಲರೂ ನಮ್ಮ ನಮ್ಮ ಕರ್ಮಗಳಿಗೆ, ಕಷ್ಟಗಳಿಗೆ ಕಾಲವನ್ನು ದೂಷಿಸುತ್ತೇವೆ. ಆದರೆ, ಇದು ತರವಲ್ಲವೆಂಬುದನ್ನು ಕವಿ ಈ ರೀತಿ ವ್ಯಕ್ತಪಡಿಸಿದ್ದಾರೆ.

"ಗುಣಾಶ್ಚ ದೋಷಾಶ್ಚ ಪರೀಕ್ಷಣೀಯಾಃ
ನಿಷ್ಪಕ್ಷಪಾತೈಃ ಕೃತಿಭಿರ್ಯುಗಾನಾಮ್ |
ಪೂರ್ವೇಽಭಿವಂದ್ಯಾಶ್ಚರಮೇ ತು ನಿಂದ್ಯಾ
ಯುಗಂ ತು ಕಿಂಚನ್ನ ಹಿ ಗರ್ಹಣೀಯಮ್.[21] ||"

"ಕೃತೇ ಯುಗೇ ತು ಕೇಚಿದೇವ ವೇದಮಧ್ಯಗೀಷತ

[17] ನಾಗರಾಜಶತಕಮ್-೧೪
[18] ಸಜ್ಜನಶತಕಮ್-೨೦
[19] ಸಜ್ಜನಶತಕಮ್-೯೪
[20] ದುರ್ಜನಶತಕಮ್-೩
[21] ಕಲಿವಿಮರ್ಶನಶತಕಮ್-೪

ಪ್ರಕಾಶಮಾಪ ನೈವ ಭೂಯಸಾಂ ತದಾ ಮತೇರ್ಬಲಮ್ |
ಕಲೌ ಯುಗೇ ಸುವಿದ್ಯತಾಮುಪಾರ್ಜಿತುಂ ನ ಕಸ್ಯಚಿತ್
ಸವಿಘ್ನತಾಸ್ತಿ ತದ್ವರಂ ಕಲಿಂ ಹಿ ಮನ್ಮಹೇ ವಯಮ್.[22] ||"

ಸಮಗ್ರ ಭಾರತೀಯರ ಆದರ್ಶವ್ಯಕ್ತಿ, ರಾಜಧರ್ಮದ ಧರ್ಮಮೂರ್ತಿ, ಮಹಾನುಭಾವ ಶ್ರೀರಾಮ ಜೀವನಚರಿತೆಯನ್ನು ಕುರಿತಂತೆ ನಾಗರಾಜಕವಿಯು ಶತಕಗ್ರಂಥವನ್ನು ರಚಿಸಿದ್ದಾರೆ. ಇಲ್ಲಿ ಶ್ರೀರಾಮನ ಮುಕ್ತಕಂಠದಿಂದ ಅನಂತ ಗುಣಗಾನವನ್ನು ಮಾಡಿ, ಕೃತಾರ್ಥರಾಗಿದ್ದಾರೆ.

"ಭವತ್ಸಮಾನೋ ನ ಭವಸ್ಯ ಹರ್ತಾ
ಜಗೌ ಭವೋ ನಾಮಸಹಸ್ರತುಲ್ಯಮ್ |
ಶ್ರೀರಾಮನಾಮೇತಿ ತತೋ ಸ್ಮಿ ದಾಸ-
ಸ್ತ್ವನ್ನಾಮಧೇಯಸ್ಯ ಹಿ ರಾಮಚಂದ್ರ.[23] ||"

"ಯಥಾರ್ಥವಾದೀ ನಿಗಮಾರ್ಥವಾದೀ
ಯುದ್ಧೇ ಸಮರ್ಥಃ ಪುರುಷಾರ್ಥದಾತಾ |
ಸದರ್ಥಶಾಸ್ತ್ರೇ ಪ್ರಕಟಪ್ರಭಾವೋ
ಭಾಸ್ವದ್ವಿತೀಯೋ ಭುವಿ ರಾಮಚಂದ್ರ.[24] ||"

**ಉಪಸಂಹಾರ**

ಹೀಗೆ, ಶತಕಸಾಹಿತ್ಯವು ನಿರಂತರವಾಗಿ ಜೀವನಮೌಲ್ಯಗಳು, ನೈತಿಕಮೌಲ್ಯಗಳು, ಕರ್ತವ್ಯ, ಸಾಮಾಜಿಕ ಕಳಕಳಿ, ಕೌಟುಂಬಿಕ, ಜೀವನಶೈಲಿ, ಲೌಕಿಕಾಲೌಕಿಕ, ಸಂಸ್ಕೃತಿ, ವಿಶ್ವಭ್ರಾತೃತ್ವ, ಸಮಾಜಜೀವನ, ಅಧ್ಯಾತ್ಮಜೀವನ, ದೇಶಪ್ರೇಮ, ವಿಶ್ವಶಾಂತಿ, ಸಹಬಾಳ್ವೆ, ಪರಂಪರೆ, ಆಚಾರ-ವಿಚಾರ, ಧಾರ್ಮಿಕಶ್ರದ್ಧೆ, ವೈಜ್ಞಾನಿಕ ಚಿಂತನೆ, ಪರಿಸರಪ್ರೀತಿ, ಆರೋಗ್ಯಕರ ಜೀವನಶೈಲಿಯೇ ಮೊದಲಾದ ಅತ್ಯಮೂಲ್ಯ ವಿಚಾರಧಾರೆಯನ್ನು ಅನವರತ ಪಸರಿಸಿ, ಮನುಕುಲಕ್ಕೆ ದಾರಿದೀಪವೆನಿಸಿದೆ. ಶತಕಗಳ ರಚನೆ ಕೇವಲ ಕಾವ್ಯಸೌಂದರ್ಯದ ಆಸ್ವಾದನೆಗಷ್ಟೇ ಅಲ್ಲದೇ, ಜೀವನದ ಆಮೂಲಾಗ್ರಸಾರವನ್ನೇ ಲೋಕಕ್ಕೆ ಸಮರ್ಪಿಸುವುದಾಗಿದೆ. ಭರ್ತೃಹರಿಯ ವಾಕ್ಯಗಳಲ್ಲೇ ಹೇಳುವುದಾದರೆ,

"ನೈವಾಕೃತಿಃ ಫಲತಿ ಕುಲಂ ನ ಶೀಲಂ
ವಿದ್ಯಾಪಿ ನೈವ ನ ಚ ಯತ್ನ ಕೃತಾಽಪಿ ಸೇವಾ |
ಭಾಗ್ಯಾನಿ ಪೂರ್ವತಪಸಾ ಖಲು ಸಂಚಿತಾನಿ
ಕಾಲೇ ಫಲಂತಿ ಪುರುಷಸ್ಯ ಯಥೈವ ವೃಕ್ಷಾಃ.[25] ||"

"ನ ಸಂಸಾರೋತ್ಪನ್ನಂ ಚರಿತಮನುಪಶ್ಯಾಮಿ ಕುಶಲಂ
ವಿಪಾಕಃ ಪುಣ್ಯಾನಾಂ ಜನಯತಿ ಭಯಂ ಮೇ ಪಮೃಶತಃ |
ಮಹದ್ಭಿಃ ಪುಣ್ಯೈ ಘೈಶ್ಚಿರ ಪರಿಗೃಹೀತಾಶ್ಚ ವಿಷಯಾ
ಮಹಾಂತೋ ಜಾಯಂತೇ ವ್ಯಸನ ಮಿವ ದಾತುಂ ವಿಷಯಾಣಾಮ್.[26] ||"

ಪ್ರಪಂಚದ ನಿತ್ಯ-ಸತ್ಯತೆಯನ್ನು ನಾಗರಾಜಕವಿ ಈ ರೀತಿ ವರ್ಣಿಸಿದ್ದಾರೆ.

"ಸಮಸ್ತಲೋಕಸ್ಯ ವಿಚಿಂತಯಾ ಕಿಮ್
ದೇವಸ್ಸದಾ ತದ್ವಹನೇ ಸಮರ್ಥಃ |
ಮುಕ್ತೌ ಸ್ವಯಂ ತ್ವಂ ಪ್ರಯತಸ್ವ ಯಸ್ಮಾತ್
ತ್ವಮೇವ ಬಂಧುಸ್ತವ ನಾಗರಾಜ.[27] ||"

**ಪರಾಮರ್ಶನಗ್ರಂಥಗಳು**


1. 'ಸುಭಾಷಿತ ಮಂಜರೀ'- ಸಂಪಾದಿತ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು- ೫೬೦೦೧೮, ಪ್ರಥಮ ಮುದ್ರಣ-೨೦೧೦
2. 'ಆನಂದವರ್ಧನನ ಕಾವ್ಯಮೀಮಾಂಸೆ ಮತ್ತು ಕನ್ನಡ ಧ್ವನ್ಯಾಲೋಕ'- ಡಾ|| ಕೆ. ಕೃಷ್ಣಮೂರ್ತಿ, ಅಭಿನವ ಪ್ರಕಾಶನ, ವಿಜಯನಗರ, ಬೆಂಗಳೂರು-೫೬೦೦೪೦, ಮರುಮುದ್ರಣ-೨೦೦೭
3. ಮಹಾಕವಿ ಶ್ರೀವೇಂಕಟಾಧ್ವರಿಕೃತಮ್ 'ಶ್ರೀಲಕ್ಷ್ಮೀಸಹಸ್ರಮ್'- ಅನುವಾದ:ತರ್ಕವೇದಾಂತವಿದ್ವಾನ್ ಡಾ|| ಎಂ.ಇ. ರಂಗಾಚಾರ್, ಶ್ರೀನಿತ್ಯಾನಂದ ಪ್ರಕಾಶನ, ಅಶೋಕನಗರ, ಬೆಂಗಳೂರು-೫೬೦೦೫೦, ಪ್ರಥಮ ಮುದ್ರಣ-೨೦೦೮
4. 'ಭರ್ತೃಹರಿಯ ಶತಕಗಳು'- ಸಂಪಾದಕರು-ಅವಿನಾಶ್ ಕೊಡಂಕೇರಿ ಮತ್ತು ಬೆಂ.ನಾ.ಶಾಮಸುಂದರ್, ವಿಜಯವಾಹಿನಿ ಪಬ್ಲಿಕೇಷನ್ಸ್, ಶಿವಮೊಗ್ಗ, ಪ್ರಥಮ ಮುದ್ರಣ-೨೦೧೦
5. 'ನಾಗರಾಜಕಾವ್ಯವಲ್ಲರೀ' – ವಿದ್ವಾನ್ ಡಾ. ಎಚ್.ವಿ.ನಾಗರಾಜರಾವ್, ಸುಧರ್ಮಾ ಪ್ರಕಾಶನಮ್, ಮೈಸೂರು, ೨೦೧೫


[22] ಕಲಿವಿಮರ್ಶನಶತಕಮ್-೫೯
[23] ಶ್ರೀರಾಮಚಂದ್ರಶತಕಮ್-೫
[24] ಶ್ರೀರಾಮಚಂದ್ರಶತಕಮ್-೯೧
[25] ನೀತಿಶತಕಮ್-೯೭
[26] ವೈರಾಗ್ಯಶತಕಮ್-೧೧
[27] ನಾಗರಾಜಶತಕಮ್-೫೭